Tanks in Tiptur Taluk

*Q.—303. Sri K. P. REVANNASIDDAPPA (Tiptur).—

Will the Government be pleased to state :—

(a) the number of major and minor tanks in Tiptur Taluk at present;

(b) whether they are aware that some of these tanks are breached;

(c) whether repair works of these tanks have been taken up;

(d) if so, the progress made in this behalf so far?

A.—Sri ALUR HANUMANTHAPPA (Deputy Minister for Minor Irrigation).—

(a) Major Tanks—46.
Minor Tanks—108.

(b) Yes.

(c) Yes, except one.

(d) (i) Number of tanks breached—30.
(ii) Number of breach filling works completed—29.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಈ ವರ್ಷ ಒಟ್ಟು ಒಡೆದು ಹೋಗುವ ಸಂಭವವಿರತಕ್ಕಂತಹ ಕೆರೆಗಳ ಸಂಖ್ಯೆ ಎಷ್ಟು?

†ಶ್ರೀ ಆಲೂರು ಹನುಮಂತಪ್ಪ.—ಅದು ಮಳೆ ಬಂದ ಮೇಲೆ ಗೊತ್ತಾಗುತ್ತದೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಮಳೆ ಬಂದಮೇಲೆ ಪ್ರತಿವರ್ಷ ಕೂಡ ವರ್ಷ ಒಂದಕ್ಕೆ 20—30 ಒಡೆದರೆ ಹೇಗೆ! ಒಡೆಯುವುದಕ್ಕೆ ಮುಂಚೆಯೇ ರಿಪೇರಿ ಮಾಡಿದರೆ, ಎಷ್ಟೋ ಕೆರೆಗಳು ಒಡೆಯುತ್ತಾ ಇತ್ತೇ ಸ್ವಾಮಿ?

ಶ್ರೀ ಆಲೂರು ಹನುಮಂತಪ್ಪ.—ಹಾಗೆ ಊಹೆ ಮಾಡಿ ಹೇಳಲಿಕ್ಕಾಗುವುದಿಲ್ಲ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಈಗ ಒಂದು ಸಾವಿರ, ಐದು ಸಾವಿರ ಖರ್ಚುಮಾಡಿದರೂ, ಮಳೆ ಬಂದರೆ ಒಡೆಯುತ್ತದೆ. ಆದ್ದರಿಂದ ಮುಂಚೆಯೇ ರೆಸ್ಟೋರ್ ಮಾಡಲು ರಿಪೇರಿ ಮಾಡಲು ಕ್ರಮ ತೆಗೆದುಕೊಳ್ಳಲಾಗುವುದಿಲ್ಲವೇ?

ಶ್ರೀ ಆಲೂರು ಹನುಮಂತಪ್ಪ.—ರೆಸ್ಟೋರ್ ಮಾಡುವ ಕೆಲಸ ದೇಶದ ಎಲ್ಲಾ ಕಡೆಗಳಲ್ಲೂ ತೆಗೆದುಕೊಂಡಿದೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಇಷ್ಟರವರೆಗೆ ಎಷ್ಟು ಕೆರೆಗಳ ರಿಪೇರಿ ಮಾಡಿದ್ದೀರಿ? ಮತ್ತು ಕೆಲವನ್ನು ರಿಪೇರಿ ಮಾಡದಿರುವುದಕ್ಕೆ ಕಾರಣವೇನು?

ಶ್ರೀ ಆಲೂರು ಹನುಮಂತಪ್ಪ.—1960 ರಿಂದ 1964ರ ಕೊನೆಯವರೆಗೆ 29 ಕೆರೆಗಳನ್ನು ಈಗಾಗಲೆ ಮುಗಿಸಿದ್ದಾರೆ. ಇದಕ್ಕೆ ಒಟ್ಟು 7 ಲಕ್ಷ 24 ಸಾವಿರ ಖರ್ಚು ಮಾಡಿದ್ದೇವೆ. ಆದರೆ ಒಂದು ರುದ್ರಪುರದ ಟ್ಯಾಂಕು ಕೆಲಸ ನಿಂತಿದೆ. ಅದೂ ಕಾರ್ಯರೂಪಕ್ಕೆ ಬರುತ್ತಾ ಇದೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಅದು ಒಡೆದುಹೋಗಿ ಎಷ್ಟು ವರ್ಷವಾಯಿತು ಸ್ವಾಮಿ?

ಶ್ರೀ ಆಲೂರು ಹನುಮಂತಪ್ಪ.—ಅದು ಒಂದು ಒಡೆದು 19 ವರ್ಷಗಳಾಗಿರಬಹುದು. ಕೆರೆ ಅಂಗಳ ಉಳುಮೆಯಾಗಿರುವುದರಿಂದ ಅದರ ಕೆಲಸ ತಡೆಯಾಗಿದೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಹೀಗೆ ಸರ್ಕಾರದವರು ಒಡೆದುಹೋದ ಕೆರೆಗಳನ್ನು ರಿಪೇರಿ ಮಾಡುವುದಕ್ಕೆ ವಿಳಂಬವಾದರೆ, ರೈತರಿಗೆ ತುಂಬಾ ಅನಾನುಕೂಲವಾಗುತ್ತದೆ. ಆದ್ದರಿಂದ ಒಡೆದುಹೋಗುವ ಮೊದಲೆಲ್ಲ ಎಲ್ಲೆಲ್ಲ ಇವೆಯೆಂದು ನೋಡಿ ರಿಪೇರಿ ಮಾಡುವುದಕ್ಕೆ ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತದೆ?

Mr. SPEAKER.—If some Hon'ble Members are not satisfied, they may send a notice for half-an-hour discussion.

Sri ALUR HANUMANTHAPPA.—These are all hypothetical questions. If he asks any specific question about a particular tank and if restoration will be taken up, Government will certainly look into it.

Mr. SPEAKER.—Passed over question No. 91.

Installation of Irrigation Pumpsets.

*Q.—91. Sri B. L. GOWDA (Challakere).—

Will the Government be pleased to state :—

(*a*) whether there is any proposal to instal irrigation pumpsets on both the banks of the river Vedavati in Hassan and Chickmagalur Districts ;

(*b*) is so, whether it would not hamper the flow of water into Vani Vilasa Sagar in Hiriyur Taluk of Chitradurga District ?

A.—Sri ALUR HANUMANTHAPPA (Deputy Minister for Minor Irrigation).—

(*a*) No.

(*b*) Does not arise.

ಶ್ರೀ ಬಿ. ಎಲ್. ಗೌಡ.—ಸ್ವಾಮಿ, ಈಗ ಹಾಸನ ಚಿಕ್ಕಮಗಳೂರು ಜಿಲ್ಲೆಗಳಲ್ಲಿ ನೀರಾವರಿಯನ್ನು ಸ್ಥಾಪಿಸಿರುವುದರಿಂದ ವಾಣಿವಿಲಾಸ ಕೆರೆಗೆ ತೊಂದರೆಯಾಗುವುದಿಲ್ಲವೇ ?

†ಶ್ರೀ ಅಲೂರು ಹನುಮಂತಪ್ಪ.—ಈಗ ಹಾಸನ ಜಿಲ್ಲೆಯಲ್ಲಿ ಯಾವ ಸ್ಕೀಮೂ ತಯಾರಾಗಿಲ್ಲ. ಮತ್ತು ಚಿಕ್ಕಮಗಳೂರು ಜಿಲ್ಲೆಯಲ್ಲಿ ವೇದವತಿ ಬೇಸಿನ್‌ನಲ್ಲಿ ಒಂದು ಎಸ್ಟಿಮೇಟ್ ಆಗಿದೆ. ಅದು ಇನ್ನೂ ಕಾರ್ಯರೂಪಕ್ಕೆ ಬಂದಿಲ್ಲ.

ಶ್ರೀ ಹೆಚ್. ಆರ್. ಕೇಶವಮೂರ್ತಿ.—ಪಂಪ್‌ಸೆಟ್ಟುಗಳನ್ನು ಹಾಕುವುದು ಕೇವಲ ಅಭಾವವಿದ್ದ ಪ್ರದೇಶಗಳಲ್ಲಿ, ಅದಕ್ಕೆ ಅಬ್ಜೆಕ್ಷನ್ ಮಾಡಿದರೆ ಹೇಗೆ ಸ್ವಾಮಿ ?

ಶ್ರೀ ಅಲೂರು ಹನುಮಂತಪ್ಪ.—ಅವರು ಕೇಳಿರುವುದು ವಾಣಿವಿಲಾಸ ಕೆರೆಯ ವಿಚಾರ. ಅಲ್ಲಿಯ ನೀರು ಕಡಿಮೆಯಾಗುತ್ತದೆ ಎಂದು.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಹಾಸನದಲ್ಲಿ ಪಂಪ್‌ಸೆಟ್ ಹಾಕುವುದಕ್ಕೂ, ವಾಣಿವಿಲಾಸ ಸಾಗರಕ್ಕೂ ಏನು ಸಂಬಂಧ ಸ್ವಾಮಿ ?

ಶ್ರೀ ಅಲೂರು ಹನುಮಂತಪ್ಪ.—ಇರಿಗೇಷನಿಗೆ ಎಲ್ಲಿ ಅವಕಾಶವಿದೆಯೋ ಅದನ್ನು ನೋಡಿಕೊಂಡು, ಎಲ್ಲಿ ಸಾಧ್ಯವಿದೆಯೋ, ಅಲ್ಲಿ ಮಾಡುತ್ತೇವೆ.

Mr. SPEAKER.—Questions are over.